M.V.C No. 65/2024
**ಪಿ.ಡಬ್ಲೂ –1**

**ದಿನಾಂಕಃ 16.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**
**ಪಾಟೀ ಸವಾಲು ಆರ್.3 ಪರ ವಕೀಲರಿಂದಃ**

1. ನನ್ನ ಮನೆ ದೊಡ್ಡಬಳ್ಳಾಪುರ ಸರ್ಕಾರಿ ಆಸ್ಪತ್ರೆ ಹಿಂಭಾಗ ಇದೆ. ಬೆಳಿಗ್ಗೆ 2-00 ಗಂಟೆಗೆ ಘಟನೆ ನಡೆದಿತ್ತು. ಅಗ ನಾನು ಹಾಗೂ ಮನೆಯವರೆಲ್ಲರೂ ನಿದ್ರೆಯಲ್ಲಿ ಇದ್ದೆವು ಎಂದರೆ ಸರಿ. ನಮ್ಮ ಮನೆಯ ಕಂಪೌಂಡಗೆ ಗೂಡ್ಸ ಲಾರಿ ಡಿಕ್ಕಿ ಮಾಡಿದಾಗ ಜೋರಾಗಿ ಶಬ್ದ ಕೇಳಿ ಬಂದಾಗ ಗೊತ್ತಾಯಿತು. ನಾವು ಆಚೆ ಬಂದು ನೋಡಿದೆವು. ಗಾಡಿ ಬಂದು ಕಂಪೌಂಡಗೆ ಡಿಕ್ಕಿ ಮಾಡಿದ್ದರಿಂದ ಕಂಪೌಂಡ್ ಬಿದ್ದು ಹೋಗಿತ್ತು. ಗಾಡಿ ಡ್ರೈನೈಜ್ಗೆ ಸಿಕ್ಕಿಕೊಂಡಿತ್ತು, ವಾಹನದ ನಂಬರ್ ಗೊತ್ತಿಲ್ಲ. ಸದರಿ ವಾಹನ ಕಲ್ಲು ಮಣ್ಣು ಸಾಗಿಸುವ ವಾಹನ ಅಲ್ಲ. ನಾನು ಅಲ್ಲದೆ ಸ್ಥಳದಲ್ಲಿ ಬೇರೆ ಯಾರು ಸಾರ್ವಜನಿಕರು ಇರಲಿಲ್ಲ. ನಮ್ಮದು ಒಂಟಿ ಮನೆ. ವಾಹನದ ಚಾಲಕ ಓಡಿಹೋಗಿದ್ದನು. ನನ್ನ ಮನೆಯಲ್ಲಿ 7 ಜನ ಇದ್ದೇವೆ, 5 ಜನ ಘಟನೆ ನೋಡಿದ್ದೇವೆ. ಇನ್ನು ಇಬ್ಬರು ಮನೆಯಲ್ಲಿ ಇರಲಿಲ್ಲ.

2. ಬೆಳಗಾದ ಮೇಲೆ ಪೊಲೀಸರಿಗೆ ವಿಷಯ ತಿಳಿಸಿದೆವು. ದೂರನ್ನು ಪೋಲಿಸರಿಗೆ ನಾನೇ ಕೊಟ್ಟಿದ್ದೇನೆ. ಗೂಡ್ಸ ವಾಹನವೇ ನಮ್ಮ ಕಂಪೌಂಡ್ಗೆ ಡಿಕ್ಕಿ ಮಾಡಿತ್ತು ಎಂದು ನಾನು ನೋಡಿಲ್ಲ, ಅದು ನಮ್ಮ ಕಂಪೌಂಡ್ ಗೆ ಸಿಕ್ಕಿಹಾಕಿಕೊಂಡಿದ್ದರಿಂದ ಅದೇ ಡಿಕ್ಕಿ ಮಾಡಿದೆ ಎಂದು ಪೋಲಿಸರಿಗೆ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಘಟನೆಯನ್ನು ನಾನು ಕಣ್ಣಾರೆ ನೋಡದೆ ಇರುವುದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮನೆ ಕಟ್ಟಿ ಸುಮಾರು 30 ವರ್ಷಗಳಾಯಿತು. ನಮ್ಮ ಮನೆ ಹಳೆಯದಾದ್ದರಿಂದ ಸ್ವಾಭಾವಿಕವಾಗಿ ಬಿದ್ದುಹೋಗಿರುತ್ತದೆ ವಾಹನ ಡಿಕ್ಕಿ ಮಾಡಿದ್ದರಿಂದ ಅಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಕಂಡಿಕೆ 4 ರಲ್ಲಿ ಹೇಳಿರುವ ಹಾಗೆ 5.9*30 ಫಿಟ್ ಡ್ಯಾಮೇಜ್ ಆಗಿರುತ್ತದೆ.

3. ದೂರು ಕೊಟ್ಟ ನಂತರ ಅದೇ ದಿನ ಸಂಜೆ ಪೋಲಿಸರು ಬಂದು ಸ್ಥಳ ಪರಿಶೀಲನೆ ಮಾಡಿ ಪೋಟೊ ತೆಗೆದುಕೊಂಡು ಹೋದರು. ನಂತರ ಬೇರೆ ಯಾರು ಬಂದಿರಲಿಲ್ಲ. ಜೆಸಿಬಿ ಮತ್ತು ಟ್ರ್ಯಾಕ್ಟರ ನಿಂದ ಕಂಪೌಂಡ್ ಬಿದ್ದು ಹೋಗಿದ್ದ ಡೆಬ್ರಿಸ್ ಗಳನ್ನು ಸ್ವಚ್ಛಗೊಳಿಸಲಾಗಿತ್ತು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ.ನಂತರ ಸಿವಿಲ್ ಇಂಜಿನಿಯರ್ ಮುಖಾಂತರ ಡ್ಯಾಮೇಜ್ ಆಗಿರುವುದರ ಎಸ್ಟಿಮೇಟ್ ಮಾಡಿಸಿರುತ್ತೇನೆ. ಅವರ ಪ್ರಕಾರ **1,34,890** ರೂ ಡ್ಯಾಮೇಜ್ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಕಂಪೌಂಡ್ ನ್ನು ಮರು

ನಿರ್ಮಾಣ ಮಾಡಲು ಖರ್ಚು ಕೂಡ ಅದರೊಳಗೆ ಸೇರಿರುತ್ತದೆ. ಈಗ ಕಂಪೌಂಡ ಸರಿ ಮಾಡಿಸಿದ್ದೇನೆ. ಕಂಪೌಂಡ ಬಿದ್ದುಹೋಗುವ ಮುಂಚಿನ ಪೋಟೊ ಹಾಗೂ ಹೊಸದಾಗಿ ನಿರ್ಮಣ ಮಾಡಿರುವ ಕಂಪೌಂಡ ಪೋಟೊ ಕೊಟ್ಟಿಲ್ಲ. ಪೋಲಿಸರು ತೆಗೆದ ಪೋಟೊ ನನಗೆ ಕೊಟ್ಟಿರಲಿಲ್ಲ. ಪ್ರಮಾಣಪತ್ರದಲ್ಲಿ ಹೇಳಿರುವ ಹಾಗೆ ಅಷ್ಟು ಡ್ಯಾಮೇಜ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು ಮಾನಸಿಕವಾಗಿ ಆಘಾತವಾಗಿರುವುದರ ಬಗ್ಗೆ 50,000 ರೂ ಕೊಡಲು ಬರುವುದಿಲ್ಲ , ಅದೇ ರೀತಿ ಇತರೆ ಸಿವಿಲ್ ವರ್ಕ ಖರ್ಚುಗಳಿಗೆ 15000 ರೂ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. 1,34,890 ರೂ ಖರ್ಚು ಆಗಿಲ್ಲ ಹೀಗಾಗಿ ಅಷ್ಟು ಹಣಕ್ಕೆ ನಾನು ಅರ್ಹಲ್ಲ ಎಂದರೆ ಸರಿಯಲ್ಲ. ಹೆಚ್ಚಿ ನ ಪರಿಹಾರ ಪಡೆದುಕೊಳ್ಳುವ ಸಲುವಾಗಿ ಹೆಚ್ಚಿ ನ ಹಣ ತೋರಿಸಿದ್ದೇನೆಂದರೆ ಸರಿಯಲ್ಲ.

4. ಕಂಪೌಂಡ ಮರುನಿರ್ಮಾಣಕ್ಕೆ ಸಾಮಾನುಗಳನ್ನು ನಾನೇ ತಂದುಕೊಟ್ಟಿದ್ದೆ, ಕಂಟ್ರಾಕ್ಟ ವಹಿಸಿಕೊಟ್ಟಿರಲಿಲ್ಲ. ಸದರಿ ಸಾಮಾನುಗಳನ್ನು ಖರೀದಿಸಿರುವ ಬಗ್ಗೆ ದಾಖಲೆ ಕೊಟ್ಟಿಲ್ಲ. ಒಂದು ವಾರ ಲೇಬರ್ ಖರ್ಚು ಆಗಿದೆ ಎಂಬುದಕ್ಕೆ ದಾಖಲೆ ಹಾಜರುಪಡಿಸಿಲ್ಲ. ಈ ಎಲ್ಲಾ ಕಾರಣದಿಂದ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**